# ಇಂಟರ್‌ನೆಟ್‌ನಲ್ಲೊಂದು ಮುಕ್ತ ಕನ್ನಡ ಡಿಜಿಟಲ್ ಆಗರ*

## ಎಂ. ಎಸ್. ಶ್ರೀಧರ್


ವಿಶ್ವಾದ್ಯಂತ ಸಾರ್ವಜನಿಕ ತೆರಿಗೆ ಹಣದ ನೆರವಿನಿಂದ ನಡೆಸಲಾಗುವ ಸಂಶೋಧನೆಗಳ ಫಲಿತಾಂಶಗಳು ವಿಜ್ಞಾನ ಮತ್ತು ತಂತ್ರಜ್ಞಾನ ನಿಯತಕಾಲಿಕೆಗಳಲ್ಲಿ ಲೇಖನಗಳ ರೂಪದಲ್ಲಿ ಸತತ ಪ್ರಕಟವಾಗುತ್ತಿದ್ದರೂ ಅವುಗಳನ್ನು ಎಲ್ಲರೂ ಸುಲಭದಲ್ಲಿ ಪಡೆದು ಪರಾಮರ್ಶಿಸಲಾಗದು. ಈ ನಿಯತಕಾಲಿಕೆಗಳು ಕೆಲವೊಮ್ಮೆ ಲಕ್ಷಾಂತರ ರೂಪಾಯಿಗಳಷ್ಟು ದುಬಾರಿಯಾಗಿ ಸಾಮಾನ್ಯರ ಕೈಗೆಟಕುವುದಿಲ್ಲವಾಗಿ ವಿಜ್ಞಾನಿಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಲೇಖನಗಳು ಎಲ್ಲರಿಗೂ ಸುಲಭದಲ್ಲಿ ಪುಕ್ಕಟೆ ದೊರೆಯುವಂತೆ ಮಾಡಲು open access (ಮುಕ್ತ ಪಡೆಯುವಿಕೆ) ಚಳುವಳಿಯೊಂದನ್ನು ಹೂಡಿದ್ದಾರೆ. ಇಷ್ಟಾದರೂ ಲೇಖನಗಳನ್ನು ಪ್ರಕಟಿಸಿದ ಪ್ರಕಾಶಕರು ವಿಜ್ಞಾನಿಗಳಿಗೆ ಯಾವ ಸಂಭಾವನೆಯನ್ನೂ ನೀಡುವುದಿಲ್ಲ. ಹೀಗೆ ಪ್ರತೀ ವರ್ಷ ಪ್ರಕಟವಾಗುವ ಲಕ್ಷಾಂತರ ಲೇಖನಗಳನ್ನು ವಾಣಿಜ್ಯಾಸಕ್ತಿ ಹೊಂದಿದ ಪ್ರಕಾಶಕರ ಕಪಿಮುಷ್ಠಿಯಿಂದ ಬಿಡುಗಡೆಗೊಳಿಸುವುದು ವಿಜ್ಞಾನಿಗಳ ಉದ್ದೇಶ. ಪರ್ಯಾಯವಾಗಿ ಇಂಟರ್‌ನೆಟ್‌ನಲ್ಲಿ ವಿವಿಧ ಶಿಸ್ತುಗಳ/ ವಿಷಯಗಳ ೩೦೦೦ಕ್ಕೂ ಅಧಿಕ ಮುಕ್ತ ಇ–ನಿಯತಕಾಲಿಕೆಗಳಲ್ಲಿ (http://www.doaj.org/) ತಮ್ಮ ಲೇಖನಗಳನ್ನು ಪ್ರಕಟಿಸುತ್ತಿದ್ದಾರೆ. ಇವುಗಳಲ್ಲಿ ಈಗಾಗಲೇ ೧,೬೭,೦೦೦ಕ್ಕೂ ಹೆಚ್ಚು ಲೇಖನಗಳು ಲಭ್ಯವಿವೆ. ಇದಲ್ಲದೆ ಸುಮಾರು ೯೦೦೦ ಮುಕ್ತ ಡಿಜಿಟಲ್ ಪತ್ರಾಗಾರಗಳು ಇಂಟರ್‌ನೆಟ್‌ನಲ್ಲಿ ಚಾಲ್ತಿಯಲ್ಲಿದ್ದು ವಿವಿಧ ಭಾಷೆಗಳ ಹಾಗೂ ವಿವಿಧ ವಿಷಯಗಳ ಪ್ರಕಟಿತ ಮತ್ತು ಅಪ್ರಕಟಿತಿ ಲೇಖನಗಳನ್ನು ಇವುಗಳಲ್ಲಿ ತುಂಬಿಸಿದ್ದಾರೆ. ಹಲವಾರು ದಿಜಿಟಲ್ ಪತ್ರಾಗರಗಳನ್ನು ಒಟ್ಟಿಗೇ ಶೋಧಿಸಲು ಅನುವುಮಾಡುವ ಯಂತ್ರಗಳು/ ವೆಬ್‌ಸೈಟುಗಳೂ ಇವೆ. ಉದಾಹರಣೆಗೆ DL Harvest (http://dlharvest.sir.arizona.edu/) ನಲ್ಲಿ ಒಂದೇ ಶಿಸ್ತಿಗೆ/ ಕ್ಷೇತ್ರಕ್ಕೆ ಸಂಬಂದಿಸಿದ ೧೪ ಮುಕ್ತ ಪತ್ರಾಗಾರಗಳ ಸುಮಾರು ೨೬,೦೦೦ ಲೇಖನಗಳನ್ನು ಒಟ್ಟಿಗೆ ಶೋಧಿಸಿ ಬೇಕಾದ್ದನ್ನು ವೀಕ್ಷಿಸಬಹುದು ಮತ್ತು ವರ್ಗಾಯಿಸಿಕೊಳ್ಳಬಹುದು.

ಕನ್ನಡ ಲೇಖನಗಳನ್ನು ಸೇರಿಸಬಹುದಾದ ಅಥವ ಪ್ರತ್ಯೇಕವಾಗಿ ಕಲೆಹಾಕಬಹುದಾದ ಇಂತಹ ಮುಕ್ತ ಡಿಜಿಟಲ್ ಆಗರಗಳ ಅವಶ್ಯಕತೆ ಇದೆ. ಪುಕ್ಕಟೆ ದೊರೆಯುವ GNU e-print, Dspace, Greenstone, ಇತ್ಯಾದಿ ವಿಶಿಷ್ಟ ತಂತ್ರಾಂಶಗಳನ್ನು ಬಳಸಿ ಕನ್ನಡ ಲೇಖನಗಳ ಪ್ರತ್ಯೇಕ ಆಗರವನ್ನಾಗಲೀ ಅಥವ Scribd, GoogleBase, ಇತ್ಯಾದಿ ಇತರರು ನಿರ್ವಹಿಸುವ platform ಗಳಲ್ಲಿ (ಅಂದರೆ ಅವುಗಳ ಭಾಗವಾದ) ಸರಳೀಕೃತ ಆಗರಗಳನ್ನು ಆರಂಭಿಸಬಹುದಾಗಿದೆ. ಬಹುತೇಕ ಕನ್ನಡ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ತಮ್ಮದೇ ಆದ ಇ–ಅವತರಣಿಕೆ ಹೊಂದಿವೆ (ಅಥವಾ ಇಷ್ಟರಲ್ಲೇ ಹೊಂದಲಿವೆ)ಯಾದರೂ ಅವು ಆಯಾ ಪತ್ರಿಕೆ/ನಿಯತಕಾಲಿಕೆಗಳ ಲೇಖನಗಳಿಗೆ ಸೀಮಿತ. ಅಂತಯೇ ಕನ್ನಡ ವಿಕಿಪೀಡಿಯ ಬಹಳ ಉಪಯುಕ್ತವಾದುದಾದರೂ ಹೆಚ್ಚಿನ ಪ್ರಕಟಿತ ಲೇಖನಗಳನ್ನು ಸಂಗ್ರಹಿಸಲಾಗಿಲ್ಲ. ಅಲ್ಲದೆ ವಿಕಿಪಿಡಿಯಾದ ಆಡಳಿತ ಸೂತ್ರ ಹಿಡಿದವರ ಮಿತಿಯನ್ನು ಮೀರಿ ಅದು ಬೆಳೆಯಲಾಗಿಲ್ಲ. ಮುಕ್ತ ಡಿಜಿಟಲ್ ಆಗರಗಳಲ್ಲಿ ಲೇಖಕರೇ ಸ್ವತಃ ಭಾಗವಹಿಸುವುದರಿಂದ ಹಕ್ಕುಸ್ವಾಮ್ಯದ (copyright) ಪ್ರಶ್ನೆ ಉದ್ಭವಿಸುವುದಿಲ್ಲ ಮತ್ತು ಲೇಖಕರು ಖಾತೆಯನ್ನು ತೆರೆದು ತಮ್ಮ ಲೇಖನಗಳನ್ನು ಆಗರಕ್ಕೆ ಬಹಳ ಸುಲಭವಾಗಿ ಸೇರಿಸಬಹುದು ಮತ್ತು ಬೇಕೆನಿಸಿದಾಗ ಪರಿಷ್ಕರಿಸಬಹುದು. ಹೀಗೆ ತಮ್ಮ ಲೇಖನಗಳನ್ನ online ರೂಪದಲ್ಲಿ ಪ್ರಕಟಿಸಿ ವ್ಯಾಪಕ ಪ್ರಸಾರಕ್ಕೊಳಪಡಿಸಲು ಮತ್ತು ಮುಂದಿನ ಪೀಳಿಗೆಗೆ ಸುಲಭವಾಗಿ ದೊರಕಿಸಲು ಲೇಖಕರಿಗೆ ಸ್ವಲ್ಪ ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಜ್ಞಾನ ಅನಿವಾರ್ಯ. ಮುಕ್ತ ಆಗರಗಳು ವ್ಯಾಪಕ metadata ಮಾಹಿತಿಯನ್ನು ನಿಗದಿತ ನಮೂನೆ (format) ಯಲ್ಲಿ ಸಂಗ್ರಹಿಸುವುದರಿಂದ ಮತ್ತು ಜನಪ್ರಿಯ ಶೋಧಯಂತ್ರಗಳು (Google, Yahoo, Scientific Commons, ಇತ್ಯಾದಿ) deep web ನಲ್ಲಿ ಅಡಗಿರುವ ಇಂತಹ ಮಾಹಿತಿಯನ್ನು ಕೂಲಂಕುಷವಾಗಿ index ಮಾಡುವುದರಿಂದ ಪ್ರತಿ ಲೇಖನವೂ ಶೋಧಯಂತ್ರ ಬಳಸಿದಾಗ ಸುಲಭ ಮತ್ತು ನಿಖರವಾಗಿ ಓದುಗರಿಗೆ ದೊರೆಯುತ್ತದೆ. ತದ್ವಿರುದ್ಧವಾಗಿ ನಾವು ಎಷ್ಟೇ ಸಂಖ್ಯೆಯಲ್ಲಿ ಕನ್ನಡ ವೆಬ್‌ಸೈಟ್‌ಗಳನ್ನು ಬೆಳೆಸಿದರೂ ಅವು ದ್ವೀಪಗಳಂತೆ ಆಗಿ ಅವುಗಳ ಒಳಗಿನ ಲೇಖನಗಳನ್ನು ಶೋಧಯಂತ್ರಗಳು ಸವಿವರದೊಡನೆ index ಮಾಡುವುದಿಲ್ಲ, ಹೆಚ್ಚೆಂದರೆ ಆ ತಾಣಗಳಿಗೆ ಸಂಪರ್ಕ ಕಲ್ಪಿಸುತ್ತವೆ. ಸ್ವತಃ ಲೇಖಕರ ವೆಬ್‌ಸೈಟ್‌ಗಳಲ್ಲಿನ ಲೇಖನಗಳೂ ಶೋಧಯಂತ್ರದ index ನಲ್ಲಿ ದಾಖಲಾಗದೇ ಕಣ್ತಪ್ಪಿಹೋಗುತ್ತವೆ. GoogleScholar ಮತ್ತು Scientific Commons ಗಳಲ್ಲಿ ಶೋಧನಡೆಸಿ ಅವು index ಮಾಡಿ ಕಲೆಹಾಕಿರುವ ಬಿಡಿ ಲೇಖನಗಳನ್ನು ಗಮನಿಸಿದರೆ ಇದು ಸ್ಪಷ್ಟ.

ಮೇಲೆ ತಿಳಿಸಿದಂತಹ ವ್ಯಾಪಕ metadata ಹೊಂದಿದ ಪ್ರತ್ಯೇಕ ತಂತ್ರಾಂಶ ಬಳಸಿದ ಕನ್ನಡದ್ದೇ ಮುಕ್ತ ಡಿಜಿಟಲ್ ಆಗರ ಮತ್ತು/ ಅಥವ ವೆಬ್‌ಸೈಟ್, ವಿಕಿಪಿಡಿಯ ಹಾಗೂ ಪತ್ರಿಕೆಗಳ ಲೇಖನಗಳನ್ನೊಳಗೊಂಡ ಕನ್ನಡ ಲೇಖನಗಳ ಆನ್‌ಲೈನ್ ಸೂಚಿ ಆರಂಭಿಸುವುದು ಇದಕ್ಕೆ ಅತ್ಯಂತ ಸೂಕ್ತ ಮಾರ್ಗ. ಆದರೆ ಈಗಾಗಲೆ ಕುಂಟುತ್ತ ಸಾಗಿರುವ ಕನ್ನಡ ಪುಸ್ತಕಗಳ ಡಿಜಿಟೈಸಿಂಗ್ ಮತ್ತು ಮರೀಚಿಕೆಯಾದ ಸಮಗ್ರ ಗ್ರಂಥಸೂಚಿ ಯೋಜನೆಗಳಂತೆ ಇದಕ್ಕೂ ಸಾಕಷ್ಟು ಸಮಯ, ಶ್ರಮ ಮತ್ತು ಸಾಂಸ್ಥಿಕ ಬೆಂಬಲ ಬೇಕು. ಅಲ್ಲಿಯವರೆವಿಗೆ ಈಗಾಗಲೇ ವಿಶ್ವವ್ಯಾಪಿಯಾಗಿರುವ Scribd ನಂತಹ ಆಗರದ ಭಾಗವಾಗಿ ಕನ್ನಡ ಲೇಖನಗಳ ಮುಕ್ತ ಆಗರವನ್ನು ಸುಲಭವಾಗಿ ತಕ್ಷಣವೇ

ಪ್ರಾರಂಭಿಸಬಹುದು. ಹಲವಾರು ಶಿಸ್ತುಗಳಿಗೆ ಈಗಾಗಲೆ ಇಂಗ್ಲೀಷ್ ಲೇಖನಗಳಿಗಾಗಿ ಪ್ರತ್ಯೇಕ ಆಗರಗಳಿವೆ. ಅವುಗಳಲ್ಲಿ ಕನ್ನಡ ಭಾಷೆಯನ್ನು ಸೇರಿಸುವಂತೆ ಒತ್ತಾಯಿಸಿ ಲೇಖನಗಳನ್ನು ಸೇರಿಸುವುದು ಸುಲಭ ಮಾರ್ಗ. ಜೊತೆಗೆ ಯಾವುದೇ ಶಿಸ್ತಿಗೆ ಪ್ರತ್ಯೇಕ ಆಗರವಿಲ್ಲವಾದಲ್ಲಿ ಮತ್ತು ಪ್ರತ್ಯೇಕ ಆಗರವಿದ್ದಗ್ಯೂ Scribd ನಂತಹ ಸಾಮಾನ್ಯ ಆಗರಗಳಲ್ಲೇ ಒಂದೊಂದು ಶಿಸ್ತಿಗೂ ಪ್ರತ್ಯೇಕ ಪಂಗಡವನ್ನು ಪ್ರಾರಂಭಿಸಬಹುದು. Scribd ಒಂದು ವಿಶ್ವವ್ಯಾಪಿ ಬೃಹತ್ ಆನ್‌ಲೈನ್ ಗ್ರಂಥಾಲಯ. ಇದರಲ್ಲಿ ನಮ್ಮ ಲೇಖನ, ಪುಸ್ತಕ ಇತ್ಯಾದಿಗಳನ್ನು ನಾವು ಸೇರಿಸಿ ಪುಕ್ಕಟೆ ಪ್ರಕಟಿಸಬಹುದಲ್ಲದೆ ಇತರರ ಲೇಖನ, ಪುಸ್ತಕಗಳನ್ನು ಪಡೆದುಕೊಳ್ಳಬಹುದು. ಟ್ರಿಪ್ ಆಡ್ಲರ್ ಮತ್ತು ಜಾರೆಡ್ ಫ್ರೆಡ್‌ಮನ್ ಎಂಬುವವರು ಸೆಪ್ಟೆಂಬರ್ ೨೦೦೬ ರಲ್ಲಿ ಆರಂಭಿಸಿದ scribd ನಲ್ಲಿನ ಲೇಖನ, ಪುಸ್ತಕ ಮತ್ತಿತರ ಮಾಹಿತಿಯನ್ನು ತಿಂಗಳೊಂದರಲ್ಲಿ ಒಂದು ಕೋಟಿ ಮಂದಿ ವೀಕ್ಷಿಸುತ್ತಾರೆ ಮತ್ತು ೩೦ ಕೋಟಿ ಪದಗಳನ್ನೊಳಗೊಂಡ ಸೂಚಿಯನ್ನು ಶೋಧಕ್ಕೆ ಅಳವಡಿಸಲಾಗಿದೆ.

ಈ ಲೇಖಕರು scribd ಹಾಗೂ RCLIS (http://eprints.rclis.org/archive/00012272/) ಆಗರಗಳ ನಿರ್ವಾಹಕರಿಗೆ ಸಲ್ಲಿಸಿದ ಮನವಿಯನ್ನು ಮನ್ನಿಸಿ ಕನ್ನಡ ಭಾಷೆಗೆ ಮಾನ್ಯತೆ ನೀಡಿ, ಕನ್ನಡ ಲೇಖನಗಳನ್ನು ಸೇರಿಸಲು ಅನುವು ಮಾಡಲಾಗಿದೆ. ಆರಂಭಕ್ಕೆ ಲೇಖಕರ ಕೆಲವು ಕನ್ನಡ ಲೇಖನಗಳನ್ನೂ ಉದಾಹರಣೆಯಾಗಿ ಈಗಾಗಲೇ ಸೇರಿಸಲಾಗಿದೆ. ಅಲ್ಲದೆ Scribdನಲ್ಲಿ ಒಂದು 'ಕನ್ನಡ ಬಳಗ' ವನ್ನೂ ಆರಂಭಿಸಲಾಗಿದೆ (http://www.scribd.com/groups/view/3866). ಯಾರು ಬೇಕಾದರೂ ಕ್ಲಿಕ್ಕಿಸಿ ಇಂಟರ್‌ನೆಟ್‌ನಲ್ಲಿ ಇವುಗಳನ್ನು ಕಾಣಬಹುದು ಹಾಗೂ ನೇರವಾಗಿ ಅಥವ ತಮ್ಮದೇ ಖಾತೆ ಪ್ರಾರಂಭಿಸಿ ಲೇಖನಗಳನ್ನು ಸೇರಿಸಬಹುದು. ಅಂದರೆ scribdನ 'ಕನ್ನಡ ಬಳಗ' ಎಲ್ಲರೂ ತಕ್ಷಣಕ್ಕೆ ಬಳಸಬಹುದಾದ ಒಂದು ಸರಳೀಕೃತ ಮುಕ್ತ ಡಿಜಿಟಲ್ ಆಗರ. ಇಂತಹವೇ ಹಲವಾರು ವಿಷಯಗಳ/ ಶಿಸ್ತುಗಳ ಆಗರಗಳನ್ನು ಕನ್ನಡ ಲೇಖನಗಳಿಗಾಗಿ ಪ್ರಾರಂಭಿಸಬಹುದು. ಈ ಲೇಖಕರು RCLIS ಮತ್ತು Scribdನಲ್ಲಿ ಸೇರಿಸಿದ ಎಲ್ಲಾ ಲೇಖನಗಳನ್ನೂ ಮೇಲೆ ತಿಳಿಸಿದ DL Harvest, GoogleScholar ಮತ್ತು Scientific Commons ಗಳಲ್ಲೂ ಕಾಣಬಹುದು.




ಲೇಖನಗಳನ್ನು ಸೇರಿಸುವಾಗ ಕೆಲವು ಸರಳ ನಿಯಮಗಳನ್ನು ಅನುಸರಿಸಬೇಕು. ಕಾಪಿರೈಟ್ ಮುಕ್ತವಾದುದನ್ನು ಮತ್ತು ತಮ್ಮ ಹಕ್ಕುಸ್ವಾಮ್ಯದಲ್ಲಿರುವುದನ್ನು ಮಾತ್ರ ಸೇರಿಸಬಹುದು. ಅಲ್ಲದೆ ಕನ್ನಡ ಲೇಖನಗಳನ್ನು ಯೂನಿಕೋಡ್‌ಗೆ ಪರಿವರ್ತಿಸಿ ಅಥವಾ PDF ಶೈಲಿಯಲ್ಲಿ ಸೇರಿಸಬೇಕು. ಮುದ್ರಿತ ರೂಪದ ಲೇಖನಗಳನ್ನು ಸ್ಕ್ಯಾನ್ ಮಾಡಿ PDF ಶೈಲಿಯಲ್ಲಿ ಸೇರಿಸಬೇಕು. ಲೇಖನಗಳನ್ನು ಸೇರಿಸಿದ ನಂತರವೂ ಪರಿಷ್ಕರಿಸಬಹುದು. ಅವುಗಳನ್ನು ಖಾಸಗಿ ಅಥವ ಮುಕ್ತ ಎಂದು ನಿರ್ಧರಿಸುವ ಹಾಗೂ ತಮ್ಮ ಸ್ನೇಹಿತರನ್ನು ಆಹ್ವಾನಿಸುವ ಮತ್ತು ಅದನ್ನು ಎಷ್ಟು ಮಂದಿ ಕ್ಲಿಕ್ಕಿಸಿದರು ಅಥವಾ ಡೌನ್‌ಲೋಡ್ ಮಾಡಿದರು ಎಂಬ ಅಂಕಿಅಂಶಗಳನ್ನು ತಿಳಿಯುವ ಅವಕಾಶವಿರುತ್ತದೆ. ಲೇಖಕರ ಚಿತ್ರ ಮತ್ತು ವಿವರಗಳನ್ನೂ ಸೇರಿಸಬಹುದು. ಇಷ್ಟೇ ಅಲ್ಲದೆ ಈ ಆಗರಗಳ ಭಾಗವಾಗಿ ಸ್ನೇಹಿತರ ಬಳಗ, ಸಂವಾದ, ಪ್ರತಿಕ್ರಿಯೆ (feedback), ಇತ್ಯಾದಿ ಸೌಲಭ್ಯಗಳೂ ಇವೆ. ಒಟ್ಟಿನಲ್ಲಿ ಕನ್ನಡ ಲೇಖನಗಳ ಆಗರಗಳನ್ನು ಸಹಕಾರಿ ಮಾದರಿಯಲ್ಲಿ ಸೃಷ್ಟಿಸಲು ಮತ್ತು ಪಸರಿಸಲು ಇದೊಂದು ಸುಲಭ ಮತ್ತು ಉತ್ತಮ ಮಾರ್ಗ. ಇದರಲ್ಲಿ ಲೇಖನಗಳನ್ನು ತುಂಬಿಸಲು ಮತ್ತು ಬಳಸಲು ಯಾವುದೇ ಮಿತಿ ಇರುವುದಿಲ್ಲ. ಇಂದು ಬಹುತೇಕ ಲೇಖನಗಳು ಕಂಪ್ಯೂಟರ್‌ನಲ್ಲಿ ಮೂಡುತ್ತವೆಯಾಗಿ ಹೆಚ್ಚಿನ ಶ್ರಮ ಮತ್ತು ಖರ್ಚಿಲ್ಲದೆ ಕನ್ನಡಿಗರು ವಿಶೇಷವಾಗಿ ಲೇಖಕರು ತಮ್ಮ ಲೇಖನಗಳನ್ನು ಇಂತಹ ಮುಕ್ತ ಡಿಜಿಟಲ್ ಪತ್ರಾಗಾರಗಳಲ್ಲಿ ಸೇರಿಸಲು ಆರಂಬಿಸಿದರೆ ಮುಂದೆ ಒಂದು ಬೃಹತ್ ಸಂಗ್ರಹವಾಗಿ, ಲೇಖನಗಳು ಹೆಚ್ಚಿನ ಆಸಕ್ತರನ್ನು ತಲುಪಿ ಎಲ್ಲರಿಗೂ ಉಪಯುಕ್ತವಾಗುವುದರಲ್ಲಿ ಸಂಶಯವಿಲ್ಲ.

---

* *ಪ್ರಜಾವಾಣಿ,* ಫೆಬ್ರವರಿ ೧೨, ೨೦೦೮, ಸಂಪುಟ ೬೧, ಸಂಚಿಕೆ ೪೩, ಕ್ರೀಡಾ ಪುರವಣಿ (ಶಿಕ್ಷಣ), ಪು. ೪.

## ಲೇಖಕರ ವಿವರ

ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೬ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, ೧೯೭೮ ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ



ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.
ಡಾ. ಶ್ರೀಧರ್ ಅವರು ೪ ಪುಸ್ತಕಗಳು ಮತ್ತು ೮೮ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪಠ್ಯಗಳನ್ನೂ ಬರೆದಿದ್ದಾರೆ. ಇವರು ಮುಕ್ತ ವಿಶ್ವವಿದ್ಯಾನಿಲಯಗಳ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ೧೯ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದಾರೆ. ಇದಲ್ಲದೆ ಸುಮಾರು ೪೫ ಲೇಖನ/ ಪ್ರವಚನಗಳನ್ನು ವಿವಿಧ ಸಮ್ಮೇಳನ / ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ.

**ವಿಳಾಸ:** ಫ್ಲಾಟ್ 2C, ಅಂತರಿಕ್ಷ ಅಪಾರ್ಟ್ ಮೆಂಟ್, ನಂ. 101/ 5, 11ನೆ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003.
**ದೂರವಾಣಿ:** 23313116/ 9845629424

**E-mail:** sridharmirle@yahoo.com, mirlesridhar@gmail.com, sridhar@isac.gov.in **;** **Phone:** 91-80-25084451; **Fax:** 91-80-25084476.